**C.C 1215/2024 P W 1 ದಿನಾಂಕಃ 12-11-2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವೈ ಡಿ ಆರ್ ವಕೀಲರಿಂದ**

ನಾನು 10ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಘಟನೆ ನಡೆದ ದಿನ ನಾನು ಹೋಂ ಸ್ಟೆ ಯಿಂದ ಬಾಗೆ ಬರುತ್ತಿರುವಾಗ ಸದರಿ ಘಟನೆ ನಡೆದಿರುತ್ತದೆ. ನಾನು ರಾತ್ರಿ 10.00 ಗಂಟೆಯವರೆಗೆ ಹೋಂ ಸ್ಟೇನಲ್ಲಿ ಇದ್ದೆನು. ಸದರಿ ದಿನ ನನ್ನ ಜೊತೆ ಬೇರೆ ಯಾರೂ ಹೋಂ ಸ್ಟೇನಲ್ಲಿ ಇರಲಿಲ್ಲ. ದಿಃ 09-09-2024 ರಂದು ಘಟನೆ ನಡೆದಿರುತ್ತದೆ. ನನಗೆ ಸಕಲೇಶಪುರ ತಾಲ್ಲೂಕಿನ ಕಟ್ಟೇಪುರ, ಬಾಗೆ ಮತ್ತು ಮಠಸಾಗರದಲ್ಲಿ ಜಮೀನು ಇರುತ್ತದೆ. ನಾನು ಘಟನೆ ನಡೆದಿದೆ ಎಂದು ಹೇಳಿದ ದಿನ ಕಟ್ಟೇಪುರ ತೋಟದಲ್ಲಿ ಬೆಳಗ್ಗೆ 9.00 ರಿಂದ ಸಂಜೆ 6.00 ರವರೆಗೆ ಕೆಲಸ ಮಾಡಿರುತ್ತೇನೆ. ಘಟನೆ ನಡೆದ ದಿನ ಹೋಂ ಸ್ಟೇನಲ್ಲಿ ಅತಿಥಿಗಳು ಇದ್ದರು. ಸದರಿ ದಿನ ಹೋಂ ಸ್ಟೇನಲ್ಲಿ ಯಾವುದೇ ಔತಣ ಕೂಟ ಇರಲಿಲ್ಲ. ನನಗೆ ಮದ್ಯಪಾನ ಸೇವನೆ ಮಾಡುವ ಅಭ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಾನು ಹೋಂ ಸ್ಟೇಯಿಂದ ರಾತ್ರಿ 9.50 ಕ್ಕೆ ಹೊರಟಿರುತ್ತೇನೆ. ಕಟ್ಟೇಪುರ ಗ್ರಾಮದಿಂದ ಬಾಗೆ ಹೋಂ ಸ್ಟೇಗೆ 7 ಕಿ ಮಿ ಅಂತರ ಇರುತ್ತದೆ. ನಾನು ಸದರಿ ದಿನ ನನಗೆ ಸೇರಿದ ಕೆ ಎ 46 ಎಂ 8392 ಕಾರಿನಲ್ಲಿ ಬಂದಿರುತ್ತೇನೆ. ನಾನು ಸದರಿ ದಿನ ಬಾಗೆ ಸರ್ಕಲ್ ಗೆ 10.15 ಕ್ಕೆ ಬಂದಿರುತ್ತೇನೆ. ನಾನು ಸದರಿ ದಿನ ಅಂದಾಜು 40 ಕಿ ಮಿ ವೇಗದಲ್ಲಿ ಬಂದಿರುತ್ತೇನೆ. ಸದರಿ ದಿನ ಬಾಗೆ ಸರ್ಕಲ್ ಬಳಿ ಗಣಪತಿ ವಿಸರ್ಜನೆಯ ಸಲುವಾಗಿ 40-50 ಜನರು ಸೇರಿದ್ದರು. ಸದರಿ ದಿನ ಮಳೆ ಇರಲಿಲ್ಲ. ನಾನು ಕಾರಿನಲ್ಲಿ ಬರುತ್ತಿದ್ದ ಕಾರಣ ಬಾಗೆ ಸರ್ಕಲ್ ಬಳಿ ಯಾರು ಯಾರು ಸೇರಿದ್ದರು ಎಂದು ನನಗೆ ಹೇಳಲು ಸಾಧವಿಲ್ಲ ಎಂದರೆ ಸರಿ. ಬಾಗೆ ಗ್ರಾಮದ ರಾಕೇಶ್ ನನಗೆ ಪರಿಚಯವಿರುತ್ತಾರೆ. ಸದರಿ ರಾಕೇಶ್ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಮತ್ತು ಜೆ ಡಿ ಎಸ್ ನ ಮುಖಂಡರಾಗಿರುತ್ತಾರೆ ಎಂದರೆ ಸರಿ. ಯಡೇಹಳ್ಳಿ ಮಂಜುನಾಥ್, ಬಾಗೆ ಪರಮೇಶ್, ವಿರೂಪಾಕ್ಷ ರವರು ನನಗೆ ಪರಿಚಯವಿರುತ್ತಾರೆ ಎಂದರೆ ಸರಿ. ಯಡೇಹಳ್ಳಿ ಮಂಜುನಾಥ್, ಬಾಗೆ ಪರಮೇಶ್, ವಿರೂಪಾಕ್ಷ ರವರು ಕಾಂಗ್ರೆಸ್ ಮುಖಂಡರು ಎಂದರೆ ಸರಿ. ಗಣಪತಿ ವಿಸರ್ಜನೆಯ ವಿಚಾರವಾಗಿ ರಾಕೇಶ್ ಮತ್ತು ಕಾಂಗ್ರೆಸ್ ಮುಖಂಡ ನಡುವೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಸದರಿ ದಿನ

ಆರೋಪಿತರು ಸ್ಥಳದಲ್ಲಿ ಇರದೇ ಇದ್ದರೂ ಸಹಾ ಅವರ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಬಾಗೆ ಸರ್ಕಲ್ ಗಣಪತಿ ವಿಸರ್ಜನಾ ಸ್ಥಳದಿಂದ 150 ರಿಂದ 200 ಮೀಟರ್ ಅಂತರದಲ್ಲಿರುತ್ತದೆ ಎಂದರೆ ಸರಿ. ಬಾಗೆ ಸರ್ಕಲ್ ಬೇಲೂರು -ಬೆಳಗೋಡು, ಹಳೆಬಾಗೆ - ಬಿ ಎಂ ರಸ್ತೆ ಸೇರುವ ದೊಡ್ಡ ವೃತ್ತ ಎಂದರೆ ಸರಿ. ಸದರಿ ಸರ್ಕಲ್ ಬಳಿ ಹೋಟೇಲ್ , ಪೆಟ್ರೋಲ್ ಬಂಕ್ ಮತ್ತು ಅಂಗಡಿಗಳು ಇರುತ್ತದೆ ಎಂದರೆ ಸರಿ. ಬಾಗೆ ಸರ್ಕಲ್ ನಲ್ಲಿ ಯಾವಾಗಲೂ ಜನಸಂಚಾರ ಇರುತ್ತದೆ ಎಂದರೆ ಸರಿ. ಬಾಗೆ ಸರ್ಕಲ್ ನಿಂದ ನನ್ನ ಮನೆಗೆ 200ಮೀಟರ್ ಅಂತರವಿರುತ್ತದೆ.

ಬಾಗೆ ಸರ್ಕಲ್ ಬಳಿ ನನ್ನ ಪರಿಚಯಸ್ಥರು ಸದರಿ ದಿನ ಇದ್ದರು. ಚಾಸಾ 3 ರವರು ಸದರಿ ದಿನ ಬಾಗೆ ಸರ್ಕಲ್ ಬಳಿ ಇದ್ದರು. ನಾನು ಅತಿವೇಗದಲ್ಲಿ ಕಾರನ್ನು ಚಲಾಯಿಸಿದ ಕಾರಣ ನನ್ನ ಕಾರು ಬಿ ಎಂ ರಸ್ತೆಯಲ್ಲಿ ಚರಂಡಿಗೆ ಬಿದ್ದಿರುತ್ತದೆ ಎಂದರೆ ಸರಿಯಲ್ಲ. ನನ್ನ ಕಾರಿನ ಬಾಗಿಲನ್ನು 2ನೇ ಆರೋಪಿಯು ತೆಗೆದಿರುತ್ತಾರೆ. ನಾನು ಮಧ್ಯಪಾನ ಸೇವನೆ ಮಾಡಿ ಕಾರು ಅಪಘಾತಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತರು ನನ್ನ ಸಹಾಯಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರ ಪೈಕಿ ಯಾರು ಯಾವ ರೀತಿಯ ಅವಾಚ್ಯ ಶಬ್ದಗಳಿಂದ ನಿಖರವಾಗಿ ಹೇಳಲು ಸಾಧ್ಯವಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಯಾರೂ ಬೈದಿರುವುದಿಲ್ಲ, ಆದರೆ ಆರೋಪಿತರು ಹಲ್ಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವೇದಕುಮಾರ್ ಯಾರು ಎಂದು ನನಗೆ ಗೊತ್ತಿಲ್ಲ. ವೇದಕುಮಾರ್ ಮತ್ತು ನನ್ನ ನಡುವೆ ಜೈವಿಕ ತಂದೆ ಎನ್ನುವ ಬಗ್ಗೆ ವಿವಾದ ಇರುತ್ತದೆ ಎಂದರೆ ಸರಿಯಲ್ಲ. ವೇದಕುಮಾರ್ ಮತ್ತು ನನ್ನ ನಡುವೆ ಗಣಪತಿ ವಿಸರ್ಜನೆ ಸಮಯದಲ್ಲಿ ಮಾತಿನ ಚಕಮಕಿ ನಡೆದಿರುತ್ತದೆ ಎಂದರೆ ಸರಿಯಲ್ಲ. 4 ಮತ್ತು 5ನೇ ಆರೋಪಿತರು ಘಟನೆ ನಡೆದಿದೆ ಎನ್ನುವ ಸಮಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆದ ದಿನವೇ ನಾನು ಚಿಕಿತ್ಸೆಗಾಗಿ ಸಕಲೇಶಪುರ ಸರ್ಕಾರಿ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗಿರುತ್ತೇನೆ. ನಾನು ಸಕಲೇಶಪುರ ಸರ್ಕಾರಿ ಆಸ್ಪತ್ರೆಯಲ್ಲಿ ಎರಡು ಗಂಟೆಗಳ ಕಾಲ ಚಿಕಿತ್ಸೆಗಾಗಿ ದಾಖಲಾಗಿದ್ದೆನು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಎಸ್ ಎಸ್ ಎಂ ಆಸ್ಪತ್ರೆಗೆ ಒಂದು ದಿನ ಒಳರೋಗಿಯಾಗಿ ದಾಖಲಾಗಿರುತ್ತೇನೆ. ಆ ಬಗ್ಗೆ ದಾಖಲಾತಿಯನ್ನು ಪೊಲೀಸರಿಗೆ ನೀಡಿರುವುದಿಲ್ಲ. ದಿನಾಂಕ 13-09-2024 ರಂದು ನಾನು ಎಸ್ ಎಸ್ ಎಂ ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತೇನೆ. ಆಸ್ಪತ್ರೆಯಿಂದ ಬಿಡುಗಡೆಯಾಗಿ ಎರಡು ದಿನಗಳ

ನಂತರ ನಾನು ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ. ದೂರು ನೀಡುವ ಸಮಯದಲ್ಲಿ ನನ್ನ ಜೊತೆ ಪರಮೇಶ್ ಮತ್ತು ಮಂಜುನಾಥ್ ಬಂದಿರುತ್ತಾರೆ.

ದೂರನ್ನು ನಾನೇ ಪೊಲೀಸ್ ಠಾಣೆಯಲ್ಲಿ ಬರೆಸಿರುತ್ತೇನೆ. ದೂರನ್ನು ಯಾರು ಬೆರಳಚ್ಚು ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಠಾಣೆಯಲ್ಲಿ ದೂರು ನೀಡಿದ ದಿನ ನಾನು ಒಟ್ಟು 5-6 ಸಹಿ ಹಾಕಿರುತ್ತೇನೆ. ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ 2 ಮತ್ತು 3 ಮಹಜರ್ ಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನನ್ನ ಜೊತೆ ಠಾಣೆಯಲ್ಲಿ ಚಾಸಾ 3 ರಿಂದ 5 ರವರು ಸಹಿ ಮಾಡಿರುತ್ತಾರೆ. ಪೊಲೀಸರು ದಿಃ 11-09-2024 ರಂದು ಮಧ್ಯಾಹ್ನ 11.30 ಗಂಟೆಗೆ ಸ್ಥಳಕ್ಕೆ ಬಂದಿರುತ್ತಾರೆ. ಪೊಲೀಸರಿಗೆ ತಕ್ಷೀರು ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಮಹಜರ್ ಕಾಲದಲ್ಲಿ ಒಟ್ಟು 4 ಜನ ಪೊಲೀಸರು ಬಂದಿದ್ದರು. ಮಹಜರನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಹಜರ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ತಕ್ಷೀರು ಸ್ಥಳದ ಚಕ್ಕುಬಂದಿ ನನಗೆ ಗೊತ್ತಿಲ್ಲ.

ನಾನು ಸದರಿ ದಿನ ಕಪ್ಪು ಬಣ್ಣದ ಪ್ಯಾಂಟ್ ಮತ್ತು ನೀಲಿ ಬಣ್ಣದ ಚೆಕ್ ಶರ್ಟ್ ಧರಿಸಿದ್ದೆನು. ತೋಟದಲ್ಲಿ ಕೆಲಸ ಮಾಡುವ ಸಮಯದಲ್ಲಿ ಹಳೆ ಬಟ್ಟೆಯನ್ನೇ ಧರಿಸುತ್ತಾರೆ ಎಂದರೆ ಸರಿ. ಕಾಫಿ ತೋಟದಲ್ಲಿ ಕೆಲಸ ಮಾಡುವ ಸಮಯದಲ್ಲಿ ಕಾಫಿ ಗಿಡಗಳಿಗೆ ತಾಗಿ ಬಟ್ಟೆ ಹರಿಯುವ ಸಂಭವ ಇರುತ್ತದೆ ಎಂದರೆ ಸರಿಯಲ್ಲ. ನಾನು ಸದರಿ ದಿನ ಧರಿಸಿದ್ದ ಶರ್ಟಿನ ಎಡ ಮತ್ತು ಬಲ ಭಾಗ ಸ್ಟಿಚ್ ಹರಿದಿರುತ್ತದೆ. ನಾನು ಚಿಕಿತ್ಸೆಗೆ ಹೋದ ಸಮಯದಲ್ಲಿ ಘಟನಾ ಸಮಯದಲ್ಲಿ ನಾನು ಧರಿಸಿದ್ದ ಬಟ್ಟೆ ನನ್ನ ಮನೆಯಲ್ಲಿಯೇ ಇತ್ತು. ಸದರಿ ಬಟ್ಟೆಯನ್ನು ನಾನು ಪೊಲೀಸರಿಗೆ ಠಾಣೆಯಲ್ಲಿ ಹಾಜರುಮಾಡಿರುತ್ತೇನೆ. ನನ್ನ ಬಟ್ಟೆ ಹರಿಯದೇ ಇದ್ದರೂ ಸಹಾ ಬಟ್ಟೆ ಹರಿದಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರದೇ ಇದ್ದರೂ ಸಹಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಂದ ನನಗೆ ಯಾವುದೇ ಗಾಯ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನನ್ನು ಹಿಡಿದು ಎಳೆದಾಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಆರೋಪಿಯು ನನ್ನ ಕೊರಳ ಪಟ್ಟಿ ಹಿಡಿದು ಎಳೆದಾಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಆರೋಪಿತರು ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವೇದಕುಮಾರ್ ಮತ್ತು ನನ್ನ ನಡುವೆ ವೈಮನಸ್ಸು ಇದ್ದುದರಿಂದ ಆರೋಪಿತರು ವೇದಕುಮಾರ್ ಜೊತೆ ಇರುತ್ತಾರೆ ಎನ್ನುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಉಪಯೋಗಕ್ಕೆ ಬಾರದ ಬಟ್ಟೆಯನ್ನು ಉದ್ದೇಶ ಪೂರ್ವಕವಾಗಿ ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಶರ್ಟಿನ ಸೈಜ್ 42 ಆಗಿರುತ್ತದೆ. ನ್ಯಾಯಾಲಯದ ಮುಂದೆ ಇರುವ ಮು.ಮಾ 1 ಶರ್ಟಿನ ಸೈಜು 40 ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಶರ್ಟ್ ನನ್ನ ಶರ್ಟ್ ಆಗದೇ ಇದ್ದರೂ ಸಹಾ ಈ ಪ್ರಕರಣಕ್ಕಾಗಿ ಸದರಿ ಶರ್ಟ್‌ನ್ನು ಪ್ರಕರಣಕ್ಕಾಗಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸಇ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಸಕಲೇಶಪುರ